# ಮಂಡ್ಯ ಜಿಲ್ಲಾ ಸಹಕಾರ ಹಾಲು ಉತ್ಪಾದಕರ ಸಂಘಗಳ ಒಕ್ಕೂಟ ನಿ.,

ಹಾಲು ಉತ್ಪನ್ನ ಘಟಕ, ಗೆಜ್ಜಲಗೆರೆ, ಮದ್ದೂರು ತಾಲ್ಲೂಕು

ಮಂಡ್ಯ ಜಿಲ್ಲೆ–571428

## ಆಡಳಿತ ಮಂಡಲಿ ಸದಸ್ಯರ ಚುನಾವಣಾ ನೋಟೀಸು

ಮಾನ್ಯರೇ,

ಮಂಡ್ಯ ಜಿಲ್ಲಾ ಸಹಕಾರ ಹಾಲು ಉತ್ಪಾದಕರ ಸಂಘಗಳ ಒಕ್ಕೂಟ ನಿ., ಹಾಲು ಉತ್ಪನ್ನ ಘಟಕ, ಗೆಜ್ಜಲಗೆರೆ ಇದರ ಆಡಳಿತ ಮಂಡಲಿ ನಿರ್ದೇಶಕರ ಚುನಾವಣೆಯನ್ನು ಮುಂದಿನ ಐದು ವರ್ಷಗಳ ಅವಧಿಗೆ ದಿನಾಂಕ:02–02–2025ನೇ ಭಾನುವಾರ ದಂದು ನಡೆಸಲು ಚುನಾವಣಾ ವೇಳಾಪಟ್ಟಿಯನ್ನು ಕಳುಹಿಸಿಕೊಡಲಾಗಿದೆ. ತಾವುಗಳು ಈ ಸಂಬಂಧ ಅಗತ್ಯ ಕ್ರಮ ತೆಗೆದುಕೊಳ್ಳಲು ಕೋರಲಾಗಿದೆ.

ಸ್ಥಳ: ಮಂಡ್ಯ
ದಿನಾಂಕ :10–01–2025

ರಿಟರ್ನಿಂಗ್ ಅಧಿಕಾರಿ
ಮಂಡ್ಯ ಜಿಲ್ಲಾ ಸಹಕಾರ ಹಾಲು ಉತ್ಪಾದಕರ ಸಂಘಗಳ
ಒಕ್ಕೂಟ ನಿ,. ಗೆಜ್ಜಲಗೆರೆ, ಮದ್ದೂರು ತಾ.
ಹಾಗೂ ಅಪರ ಜಿಲ್ಲಾಧಿಕಾರಿ, ಜಿಲ್ಲಾಧಿಕಾರಿಗಳ ಕಛೇರಿ, ಮಂಡ್ಯ

ಸಂಖ್ಯೆ: ಇಎಲ್ಎನ್(2)ಮನ್‌ಮುಲ್/44/2023–24

ರಿಟರ್ನಿಂಗ್ ಅಧಿಕಾರಿರವರ ಕಛೇರಿ
ಮಂಡ್ಯ ಜಿಲ್ಲಾ ಸಹಕಾರ ಹಾಲು ಉತ್ಪಾದಕರ ಸಂಘಗಳ ಒಕ್ಕೂಟ ನಿ,
ಹಾಗೂ ಅಪರ ಜಿಲ್ಲಾಧಿಕಾರಿ, ಜಿಲ್ಲಾಧಿಕಾರಿಗಳ ಕಛೇರಿ, ಮಂಡ್ಯ
ದಿನಾಂಕ:10–01–2025

<u>ನಮೂನೆ–**XII**</u>

ನಿಯಮ–14(3)

# ಚುನಾವಣಾ ನೋಟೀಸು

ಮಂಡ್ಯ ಜಿಲ್ಲಾ ಸಹಕಾರ ಹಾಲು ಉತ್ಪಾದಕರ ಸಂಘಗಳ ಒಕ್ಕೂಟ ನಿ,. ಗೆಜ್ಜಲಗೆರೆ, ಮದ್ದೂರು ತಾಲ್ಲೂಕು ಮಂಡ್ಯ ಜಿಲ್ಲೆ. ಇದರ ಆಡಳಿತ ಮಂಡಲಿ ನಿರ್ದೇಶಕರುಗಳಿಗೆ ಮುಂದಿನ 5 ವರ್ಷಗಳ ಅವಧಿಗೆ ಆಡಳಿತ ಮಂಡಲಿ ಚುನಾವಣೆ ನಡೆಸಲು ಸಹಕಾರ ಚುನಾವಣಾ ಆಯುಕ್ತರು, ಸಹಕಾರ ಚುನಾವಣಾ ಪ್ರಾಧಿಕಾರ ಬೆಂಗಳೂರು ಇವರ ಆದೇಶ ಸಂಖ್ಯೆ:ಸಚುಪ್ರಾ/ಮೈ.ಪ್ರಾ/ಮಂ.ಜಿ/ಆಮಚು/01/2024 ದಿನಾಂಕ:24–06–2024ರಂತೆ ರಿಟರ್ನಿಂಗ್ ಅಧಿಕಾರಿಯಾಗಿ ನೇಮಕವಾಗಿರುವ ಅಪರ ಜಿಲ್ಲಾಧಿಕಾರಿ, ಜಿಲ್ಲಾಧಿಕಾರಿಗಳ ಕಛೇರಿ, ಮಂಡ್ಯ ಆದ ನಾನು ಜಿಲ್ಲಾಧಿಕಾರಿ ಹಾಗೂ ಜಿಲ್ಲಾ ಫೆಡರಲ್, ಸಹಕಾರ ಸಂಘಗಳ ಚುನಾವಣಾಧಿಕಾರಿ, ಮಂಡ್ಯ ಜಿಲ್ಲೆರವರ ಚುನಾವಣಾ ಅಧಿಸೂಚನೆ ಸಂಖ್ಯೆ:ಇಎಲ್ಎನ್(2)ಮನ್‌ಮುಲ್/44/2023–24 ದಿನಾಂಕ:18–10–2024ರಂತೆ ನನಗೆ ದತ್ತವಾದ ಅಧಿಕಾರವನ್ನು ಚಲಾಯಿಸಿ ಕರ್ನಾಟಕ ಸಹಕಾರ ಸಂಘಗಳ ನಿಯಮಗಳು 1960 ನಿಯಮ 14(3)(ಎ)ರ ಪ್ರಕಾರ <u>ಮೈಶುಗರ್ ಪ್ರೌಢ ಶಾಲೆ, ಮೈಸೂರು–ಬೆಂಗಳೂರು ರಸ್ತೆ, ಸ್ವರ್ಣಸಂದ್ರ, ಮಂಡ್ಯ–571401</u> ಇಲ್ಲಿ ದಿನಾಂಕ:02–02–2025ರಂದು ಭಾನುವಾರ ಬೆಳಿಗ್ಗೆ 9.00 ಗಂಟೆಯಿಂದ ಸಾಯಂಕಾಲ 4.00ಗಂಟೆಯವರೆಗೆ ಚುನಾವಣೆ ನಡೆಸಲು ಈ ಕೆಳಕಂಡಂತೆ ಚುನಾವಣಾ ವೇಳಾಪಟ್ಟಿಯನ್ನು ಪ್ರಕಟಿಸಿರುತ್ತೇನೆ.

| ಕ್ರ.ಸಂ. | ವಿವರಗಳು | ದಿನಾಂಕ, ಸಮಯ, ಮತ್ತು ಸ್ಥಳ ವಿವರ |
|---|---|---|
| 1 | ಸ್ಪರ್ಧಿಸಲು ಇಚ್ಚಿಸುವಂತಹ ಅಭ್ಯರ್ಥಿಗಳು ನಾಮಪತ್ರವನ್ನು ಸಲ್ಲಿಸಲು ಪ್ರಾರಂಭದ ದಿನಾಂಕ | ದಿನಾಂಕ:18–01–2025ನೇ ಶನಿವಾರ ಬೆಳಿಗ್ಗೆ 11–00 ಗಂಟೆಯಿಂದ ಮಧ್ಯಾಹ್ನ 3–00 ಗಂಟೆವರೆಗೆ ಅಪರ ಜಿಲ್ಲಾಧಿಕಾರಿಗಳ ಕಛೇರಿ, ಜಿಲ್ಲಾಧಿಕಾರಿಗಳ ಕಛೇರಿ ಕಾರ್ಯಾಲಯ, ಮಂಡ್ಯ ಇಲ್ಲಿ ರಿಟರ್ನಿಂಗ್ ಅಧಿಕಾರಿಗಳಿಗೆ ಸಲ್ಲಿಸುವುದು. |
| 2 | ನಿಯಮ 14–ಎ ರಂತೆ ನಾಮಪತ್ರ ಸಲ್ಲಿಸಲು ಕಡೆಯ ದಿನಾಂಕ | ದಿನಾಂಕ:25–01–2025ನೇ ಶನಿವಾರ ಬೆಳಿಗ್ಗೆ 11.00 ಗಂಟೆಯಿಂದ ಮಧ್ಯಾಹ್ನ 3–00 ಗಂಟೆವರೆಗೆ ಅಪರ ಜಿಲ್ಲಾಧಿಕಾರಿಗಳ ಕಛೇರಿ, ಜಿಲ್ಲಾಧಿಕಾರಿಗಳ ಕಛೇರಿ ಕಾರ್ಯಾಲಯ, ಮಂಡ್ಯ ಇಲ್ಲಿ ರಿಟರ್ನಿಂಗ್ ಅಧಿಕಾರಿಗಳಿಗೆ ಸಲ್ಲಿಸುವುದು. |
| 3 | ನಿಯಮ 14–ಬಿ ರಂತೆ ನಾಮಪತ್ರಗಳ ಪರಿಶೀಲನೆ | ದಿನಾಂಕ:26–01–2025ನೇ ಭಾನುವಾರ ಮಧ್ಯಾಹ್ನ 12–00 ಗಂಟೆಗೆ ಅಪರ ಜಿಲ್ಲಾಧಿಕಾರಿಗಳ ಕಛೇರಿ, ಜಿಲ್ಲಾಧಿಕಾರಿಗಳ ಕಛೇರಿ ಕಾರ್ಯಾಲಯ, ಮಂಡ್ಯ ಇಲ್ಲಿ ರಿಟರ್ನಿಂಗ್ ಅಧಿಕಾರಿಗಳಿಂದ ನಾಮಪತ್ರಗಳನ್ನು ಪರಿಶೀಲಿಸುವುದು. |
| 4 | ನಿಯಮ 14–ಬಿ(4) ರಂತೆ ಕ್ರಮಬದ್ಧವಾದ ನಾಮನಿರ್ದೇಶಿತ ಅಭ್ಯರ್ಥಿಗಳ ಪಟ್ಟಿ ಪ್ರಕಟಣೆ. | ದಿನಾಂಕ:26–01–2025ನೇ ಭಾನುವಾರ ನಾಮಪತ್ರಗಳ ಪರಿಶೀಲನೆಯ ನಂತರ ಮಧ್ಯಾಹ್ನ 3–00 ಗಂಟೆಗೆ ಅಪರ ಜಿಲ್ಲಾಧಿಕಾರಿಗಳ ಕಛೇರಿ, ಜಿಲ್ಲಾಧಿಕಾರಿಗಳ ಕಛೇರಿ ಕಾರ್ಯಾಲಯ, ಮಂಡ್ಯ ಇಲ್ಲಿ ರಿಟರ್ನಿಂಗ್ ಅಧಿಕಾರಿಗಳಿಂದ. |
| 5 | ನಿಯಮ 14–ಸಿ ರಂತೆ ಉಮೇದುವಾರರಿಂದ ನಾಮಪತ್ರವನ್ನು ಹಿಂಪಡೆಯಲು ಕೊನೆಯ ದಿನಾಂಕ | ದಿನಾಂಕ:27–01–2025ನೇ ಸೋಮವಾರ ಬೆಳಿಗ್ಗೆ:11–00 ಗಂಟೆಯಿಂದ ಮಧ್ಯಾಹ್ನ 3–00 ಗಂಟೆವರೆಗೆ ಅಪರ ಜಿಲ್ಲಾಧಿಕಾರಿಗಳ ಕಛೇರಿ, ಜಿಲ್ಲಾಧಿಕಾರಿಗಳ ಕಛೇರಿ ಕಾರ್ಯಾಲಯ, ಮಂಡ್ಯ ಇಲ್ಲಿ ರಿಟರ್ನಿಂಗ್ ಅಧಿಕಾರಿಯವರಿಗೆ. |
| 6 | ನಿಯಮ 14–ಡಿ ರಂತೆ ಸಿಂಧುತ್ವ ಹೊಂದಿರುವ ಉಮೇದುವಾರರ ಪಟ್ಟಿ ಪ್ರಕಟಣೆ | ದಿನಾಂಕ:27–01–2025ನೇ ಸೋಮವಾರ ಮಧ್ಯಾಹ್ನ 3–00ಗಂಟೆಯ ನಂತರ ಜಿಲ್ಲಾಧಿಕಾರಿಗಳ ಕಛೇರಿ, ಮಂಡ್ಯ ಹಾಗೂ ವ್ಯವಸ್ಥಾಪಕ ನಿರ್ದೇಶಕರು, ಮನ್‌ಮುಲ್, ಗೆಜ್ಜಲಗೆರೆ ಕಛೇರಿಯ ನೋಟೀಸ್ ಬೋರ್ಡಿನಲ್ಲಿ ರಿಟರ್ನಿಂಗ್ ಅಧಿಕಾರಿಯವರುಗಳಿಂದ . |
| 7 | ನಿಯಮ 14–ಇ ರಂತೆ ಚುನಾವಣೆ | ದಿನಾಂಕ:27–01–2025ನೇ ಸೋಮವಾರ ಮಧ್ಯಾಹ್ನ 3–00ಗಂಟೆಯ ನಂತರ |

| | | |
|---|---|---|
| | ನಡೆಸಬೇಕಾದಲ್ಲಿ ಅರ್ಹ ಅಭ್ಯರ್ಥಿಗಳಿಗೆ ಚಿಹ್ನೆ ಹಂಚಿಕೆ. | ಅಪರ ಜಿಲ್ಲಾಧಿಕಾರಿಗಳ ಕಛೇರಿ, ಜಿಲ್ಲಾಧಿಕಾರಿಗಳ ಕಛೇರಿ ಕಾರ್ಯಾಲಯ, ಮಂಡ್ಯ ರಿಟರ್ನಿಂಗ್ ಅಧಿಕಾರಿಗಳಿಂದ. |
| 8 | ನಿಯಮ 14– ಡಿ ಮತ್ತು 14– ಇ ರಂತೆ ಚುನಾವಣೆಗೆ ಸ್ಪರ್ಧಿಸಲು ಸಿಂಧುತ್ವ ಹೊಂದಿರುವ ಉಮೇದುವಾರರ ಪಟ್ಟಿಯ ಚಿಹ್ನೆ ಸಮೇತ ಪ್ರಕಟಣೆ. | ದಿನಾಂಕ:29–01–2025ನೇ ಬುಧವಾರ ಬೆಳಿಗ್ಗೆ 11–00ಗಂಟೆಗೆ ಅಪರ ಜಿಲ್ಲಾಧಿಕಾರಿಗಳ ಕಛೇರಿ, ಜಿಲ್ಲಾಧಿಕಾರಿಗಳ ಕಛೇರಿ ಕಾರ್ಯಾಲಯ, ಇದರ ನೋಟೀಸ್ ಬೋರ್ಡ್‌ನಲ್ಲಿ ರಿಟರ್ನಿಂಗ್ ಅಧಿಕಾರಿಗಳಿಂದ ಪ್ರಕಟಣೆ. |
| 9 | ಚುನಾವಣೆ ನಡೆಯುವ ದಿನಾಂಕ, ಸ್ಥಳ ಮತ್ತು ಸಮಯ | ದಿನಾಂಕ:02–02–2025ನೇ ಭಾನುವಾರ ಮೈಶುಗರ್ ಪ್ರೌಢ ಶಾಲೆ, ಮೈಸೂರು–ಬೆಂಗಳೂರು ರಸ್ತೆ, ಸ್ವರ್ಣಸಂದ್ರ, ಮಂಡ್ಯ ಇಲ್ಲಿ ಬೆಳಿಗ್ಗೆ 9.00 ಗಂಟೆಯಿಂದ ಸಂಜೆ 4–00 ಗಂಟೆಯವರೆಗೆ. |
| 10 | ಮತಗಳ ಎಣಿಕೆಯ ದಿನಾಂಕ ಮತ್ತು ಸಮಯ | ದಿನಾಂಕ:02–02–2025ನೇ ಭಾನುವಾರ ಮೈಶುಗರ್ ಪ್ರೌಢ ಶಾಲೆ, ಮೈಸೂರು–ಬೆಂಗಳೂರು ರಸ್ತೆ, ಸ್ವರ್ಣಸಂದ್ರ, ಮಂಡ್ಯ ಇಲ್ಲಿ ಮತದಾನ ಮುಕ್ತಾಯವಾದ ನಂತರ ಮತ ಎಣಿಕೆ ನಡೆಸಲಾಗುತ್ತದೆ. |
| 11 | ರಿಟರ್ನಿಂಗ್ ಅಧಿಕಾರಿಗಳಿಂದ ಚುನಾವಣಾ ಫಲಿತಾಂಶ ಪ್ರಕಟಣೆ | ದಿನಾಂಕ:02–02–2025ನೇ ಭಾನುವಾರ ಮತ ಎಣಿಕೆ ಮುಕ್ತಾಯವಾದ ನಂತರ ಫಲಿತಾಂಶ ಪ್ರಕಟಣೆ. |

## ಚುನಾವಣಾ ಸೂಚನೆಗಳು

1) ಮಂಡ್ಯ ಜಿಲ್ಲಾ ಹಾಲು ಒಕ್ಕೂಟದ ಉಪ ವಿಧಿ ಸಂಖ್ಯೆ:7.1.3ರ ರೀತ್ಯಾ ಒಕ್ಕೂಟದ ವ್ಯಾಪ್ತಿಯ ಎಲ್ಲಾ ಪ್ರಾಥಮಿಕ ಹಾಲು ಉತ್ಪಾದಕರ ಸಹಕಾರ ಸಂಘಗಳು 12 ಮತಕ್ಷೇತ್ರಗಳಾಗಿದ್ದು, ಕ್ಷೇತ್ರವಾರು ಅರ್ಹ ಮತದಾರರ ಪಟ್ಟಿಯನ್ನು ಪ್ರತ್ಯೇಕವಾಗಿ ತಯಾರಿಸಿರುವಂತೆ ಆಯಾ ಕ್ಷೇತ್ರದ ಅಂಥ ಅರ್ಹ ಮತದಾರರು ತಮ್ಮ ಪ್ರತಿನಿಧಿಯನ್ನು ಚುನಾಯಿಸಿ ಆ ಕ್ಷೇತ್ರದ ಒಕ್ಕೂಟದ ನಿರ್ದೇಶಕರನ್ನಾಗಿ ಕಳುಹಿಸುವುದು. ಒಟ್ಟು 12 ನಿರ್ದೇಶಕರ ತಾಲ್ಲೂಕುವಾರು/ಮತಕ್ಷೇತ್ರವಾರು ವಿವರ ಈ ಕೆಳಕಂಡಂತಿರುತ್ತದೆ.

| ಕ್ರ.ಸಂ. | ಮತ ಕ್ಷೇತ್ರ /ತಾಲ್ಲೂಕು | ನಿರ್ದೇಶಕರ ಸಂಖ್ಯೆ |
|---|---|---|
| 1) | ಮಂಡ್ಯ | 3 |
| 2) | ಮದ್ದೂರು | 2 |
| 3) | ಮಳವಳ್ಳಿ | 1 |
| 4) | ಪಾಂಡವಪುರ | 1 |
| 5) | ಶ್ರೀರಂಗಪಟ್ಟಣ | 1 |
| 6) | ಕೆ.ಆರ್.ಪೇಟೆ | 2 |
| 7) | ನಾಗಮಂಗಲ | 2 |
| | ಒಟ್ಟು ಸಂಖ್ಯೆ | 12 |

## ಇತರೆ ಸೂಚನೆಗಳು

1) ಮಂಡ್ಯ ಜಿಲ್ಲೆಯ 07 ತಾಲ್ಲೂಕುಗಳ ಹಾಲು ಉತ್ಪಾದಕರ ಸಹಕಾರ ಸಂಘದಿಂದ ಚುನಾಯಿಸಲ್ಪಟ್ಟ ಅರ್ಹ ಹೊಂದಿರುವ ಸಂಘಗಳ ಪ್ರತಿನಿಧಿ(ಡೆಲಿಗೇಟ್), (ಅಧ್ಯಕ್ಷರು, ಉಪಾಧ್ಯಕ್ಷರು ಅಥವಾ ನಿರ್ದೇಶಕರುಗಳಲ್ಲಿ ಒಬ್ಬರು) ಮಾತ್ರ ಒಕ್ಕೂಟದ ಆಡಳಿತ ಮಂಡಲಿಯ ನಿರ್ದೇಶಕ ಸ್ಥಾನಕ್ಕೆ ಸ್ಪರ್ಧಿಸಲು ಅರ್ಹರಾಗಿರುತ್ತಾರೆ.
2) ನಾಮಪತ್ರದೊಂದಿಗೆ ಉಮೇದುವಾರರು ಸ್ಪರ್ಧಿಸಲು/ಮತ ಚಲಾಯಿಸಲು/ಸೂಚಿಸಲು ಅಧಿಕಾರ ನೀಡಿರುವ ಸಂಘದ ಆಡಳಿತ ಮಂಡಲಿ ಸಭೆಯ ನಡಾವಳಿಗಳನ್ನು ಮತ್ತು ಪ್ರತಿನಿಧಿಯ/ಡೆಲಿಗೇಟ್‌ನ ಛಾಯಾ ಚಿತ್ರದೊಂದಿಗೆ ವಿವರಗಳನ್ನೊಳಗೊಂಡ ನಮೂನೆಯ ನಕಲು ಪ್ರತಿಯನ್ನು ಸಂಘದ ಕಾರ್ಯದರ್ಶಿಯವರ ದೃಢೀಕರಣದೊಂದಿಗೆ ಸಲ್ಲಿಸತಕ್ಕದ್ದು.

3) ಸೂಚಕರು ಉಮೇದುವಾರರನ್ನು ಸೂಚಿಸಲು ಸಂಘದ ಆಡಳಿತ ಮಂಡಲಿ ಸಭೆಯ ನಡಾವಳಿಗಳನ್ನು ಮತ್ತು ಪ್ರತಿನಿಧಿಯ/ಡೆಲಿಗೇಟ್‌ನ ಛಾಯಾ ಚಿತ್ರದೊಂದಿಗೆ ವಿವರಗಳನ್ನೊಳಗೊಂಡ ನಮೂನೆಯ ನಕಲು ಪ್ರತಿಯನ್ನು ಸಂಘದ ಕಾರ್ಯದರ್ಶಿಯವರ ದೃಢೀಕರಣದೊಂದಿಗೆ ಸಲ್ಲಿಸತಕ್ಕದ್ದು.

4) ಹಾಲು ಒಕ್ಕೂಟದ ಆಡಳಿತ ಮಂಡಲಿಯ ನಿರ್ದೇಶಕ ಸ್ಥಾನಕ್ಕೆ ಸ್ಪರ್ಧಿಸುವ ಅಭ್ಯರ್ಥಿಯು ತಾನು ಪ್ರತಿನಿಧಿಸುವ ಸಂಘದ ಇತ್ತೀಚಿನ ಲೆಕ್ಕಪರಿಶೋಧನಾ ವರದಿಯ ಪ್ರತಿಯನ್ನು ಸಂಘದ ಕಾರ್ಯದರ್ಶಿಯವರ ಸಹಿ ಹಾಗೂ ಸಂಘದ ಮೊಹರಿನೊಂದಿಗೆ ದೃಢೀಕರಿಸಿ ನಾಮಪತ್ರಕ್ಕೆ ಲಗತ್ತಿಸತಕ್ಕದ್ದು.

5) ನಾಮಪತ್ರ ಸಲ್ಲಿಸಿರುವ ಅಭ್ಯರ್ಥಿ ಅಥವಾ ಸೂಚಕರಲ್ಲಿ ಒಬ್ಬರು ಮಾತ್ರ ಅರ್ಜಿಗಳ ಪರಿಶೀಲನಾ ವೇಳೆಯಲ್ಲಿ ಹಾಜರಿರಬಹುದು.

6) ಸಹಕಾರ ಸಂಘಗಳ ನಿಯಮ 1960ರ ನಿಯಮ 14ಎ(3)(ii)ರನ್ವಯ ಅಭ್ಯರ್ಥಿಯು ಚುನಾವಣಾ ಠೇವಣಿಯಾಗಿ ರೂ.5000.00(ಐದು ಸಾವಿರ ರೂ.ಗಳು) ಪಾವತಿಸತಕ್ಕದ್ದು. ಪರಂತು, ಅಭ್ಯರ್ಥಿಯು ಪರಿಶಿಷ್ಟ ಜಾತಿ ಅಥವಾ ಪರಿಶಿಷ್ಟ ಪಂಗಡಕ್ಕೆ ಸೇರಿದ್ದಲ್ಲಿ ಅಥವಾ ಹಿಂದುಳಿದ ವರ್ಗಕ್ಕೆ ಸೇರಿದ್ದಲ್ಲಿ ಅಥವಾ ಮಹಿಳೆಯಾಗಿದ್ದಲ್ಲಿ ಅಂತಹ ಅಭ್ಯರ್ಥಿಯು ಪಾವತಿಸಬೇಕಾದ ಚುನಾವಣಾ ಠೇವಣಿಯ ಮೇಲೆ ನಿರ್ದಿಷ್ಟಪಡಿಸಿದ ಮೊಬಲಗಿನ ಶೇಕಡಾ ಐವತ್ತರಷ್ಟು ಇರತಕ್ಕದ್ದು ಮತ್ತು ಚುನಾವಣಾ ಠೇವಣಿ ಪಾವತಿಸಿದ ರಸೀದಿ ಪ್ರತಿಯನ್ನು ನಾಮಪತ್ರದೊಂದಿಗೆ ಲಗತ್ತಿಸಬೇಕು. (ಪರಿಶಿಷ್ಟ ಜಾತಿ/ ಪರಿಶಿಷ್ಟ ಪಂಗಡ / ಹಿಂದುಳಿದ ವರ್ಗಕ್ಕೆ ಸೇರಿದ ಅಂತಹ ಅಭ್ಯರ್ಥಿಯು ಪಾವತಿಸಬೇಕಾದ ಚುನಾವಣಾ ಠೇವಣಿಯ ಮೇಲೆ ನಿರ್ದಿಷ್ಟಪಡಿಸಿದ ಮೊಬಲಗಿನ ಶೇಕಡಾ ಐವತ್ತರಷ್ಟು ಮೊಬಲಗನ್ನು ಪಾವತಿಸುವ ಸಂದರ್ಭದಲ್ಲಿ ಸಕ್ಷಮ ಪ್ರಾಧಿಕಾರದಿಂದ ನೀಡಲ್ಪಟ್ಟ ಜಾತಿ ದೃಢೀಕರಣ ಪ್ರತವನ್ನು ನಾಮಪತ್ರದೊಂದಿಗೆ ಲಗತ್ತಿಸಬೇಕು). ಚುನಾಯಿತರಾಗದ ಅಭ್ಯರ್ಥಿಗಳ ಚುನಾವಣಾ ಠೇವಣಿಯನ್ನು ಸಹಕಾರ ಸಂಘಗಳ ನಿಯಮ 14ಎಇ((2)(4))ರ ರೀತ್ಯಾ ಲೆಕ್ಕ ಹಾಕಿ ವಾಪಸ್ ನೀಡಲಾಗುವುದು/ಮುಟ್ಟುಗೋಲು ಹಾಕಿಕೊಳ್ಳತಕ್ಕದ್ದು.

7) ಸಹಕಾರ ಸಂಘಗಳ ನಿಯಮ 1960ರ ನಿಯಮಾವಳಿಗಳ ನಿಯಮ 14–ಎ(1)ರನ್ವಯ ನಾಮಪತ್ರ ಸಲ್ಲಿಸುವುದಕ್ಕಾಗಿ ಗೊತ್ತುಪಡಿಸಿದ ಕೊನೆಯ ದಿನಾಂಕದಂದು ಅಥವಾ ಅದಕ್ಕೆ ಮುಂಚೆ ಪ್ರತಿಯೊಬ್ಬ ಅಭ್ಯರ್ಥಿಯು ಖುದ್ದಾಗಿ ರಿಟರ್ನಿಂಗ್ ಅಧಿಕಾರಿಗೆ ನಿರ್ದಿಷ್ಟಪಡಿಸಿದ ಸ್ಥಳದಲ್ಲಿ ನಾಮಪತ್ರದ ನಮೂನೆ XIIIರಲ್ಲಿ ಪೂರ್ಣಗೊಳಿಸಿದ ಅಭ್ಯರ್ಥಿಯು ಮತ್ತು ಮತದಾನದ ಹಕ್ಕುಳ್ಳ ಇನ್ನೊಬ್ಬ ಸದಸ್ಯನು ಸೂಚಕನಾಗಿ ಯುಕ್ತವಾಗಿ ರುಜುಮಾಡಿರುವ ನಾಮಪತ್ರವನ್ನು ಸಲ್ಲಿಸತಕ್ಕದ್ದು. ಅಂಥ ನಾಮಪತ್ರವು ಅಭ್ಯರ್ಥಿಯು ಸಹಕಾರ ಸಂಘದ ಆಡಳಿತ ಮಂಡಲಿಗೆ ಯಾವ ಮತಕ್ಷೇತ್ರದಿಂದ ಅಭ್ಯರ್ಥಿಯಾಗಿ ಸ್ಪರ್ಧಿಸುವ ತನ್ನ ಇಚ್ಚೆಯನ್ನು ವ್ಯಕ್ತಪಡಿಸುವ ಮತ್ತು ಆತನು ಸಹಿ ಮಾಡಿರುವ ಘೋಷಣೆಯನ್ನು ಒಳಗೊಂಡಿರತಕ್ಕದ್ದು.
ಪರಂತು, ಸಂದರ್ಭಾನುಸಾರ ಯಾವ ಸದಸ್ಯನು ಅಥವಾ ಡೆಲಿಗೇಟನೂ ಒಂದು ಮತಕ್ಷೇತ್ರಕ್ಕಿಂತ ಹೆಚ್ಚಿನ ಮತಕ್ಷೇತ್ರಗಳಿಗೆ ಅಭ್ಯರ್ಥಿಯಾಗಿರತಕ್ಕದ್ದಲ್ಲ ಹಾಗೂ ಯಾವ ಸದಸ್ಯನೂ ಅಥವಾ ಡೆಲಿಗೇಟನೂ ಒಂದೇ ಮತಕ್ಷೇತ್ರದಿಂದ ಒಬ್ಬರಿಗಿಂತ ಹೆಚ್ಚಿನ ಅಭ್ಯರ್ಥಿಗಳನ್ನು ಸೂಚಿಸತಕ್ಕದ್ದಲ್ಲ. ಮತ್ತು ಪರಂತು, ಒಂದು ಸಹಕಾರ ಸಂಘದ ಪರವಾಗಿ ಸಲ್ಲಿಸಲ್ಪಟ್ಟ ನಾಮಪತ್ರವು ಆ ಸಹಕಾರ ಸಂಘದ ಆಡಳಿತ ಮಂಡಲಿಯ ನಿರ್ಣಯದೊಂದಿಗೆ ಇರತಕ್ಕದ್ದು ಮತ್ತು ನಾಮಪತ್ರಕ್ಕೆ ಅಭ್ಯರ್ಥಿಯೇ ಸ್ವತ: ಸಹಿ ಮಾಡಿರತಕ್ಕದ್ದು.

8) ಅಭ್ಯರ್ಥಿಗಳ ಮತ್ತು ಸೂಚಕರ ಸಹಿ ಇಲ್ಲದೆ ಸಲ್ಲಿಸುವ ನಾಮಪತ್ರಗಳನ್ನು, ನಿಗಧಿತ ಅವಧಿ ಮುಗಿದ ನಂತರ ಸಲ್ಲಿಸುವ ನಾಮಪತ್ರಗಳನ್ನು ಮತ್ತು ಕ್ರಮಬದ್ಧವಲ್ಲದ ನಾಮಪತ್ರಗಳನ್ನು ತಿರಸ್ಕರಿಸಲಾಗುವುದು.

9) ಕರ್ನಾಟಕ ಸಹಕಾರ ಸಂಘಗಳ 1960 ರ ನಿಯಮ 14–ಇ ರ ಪ್ರಕಾರ ರಿಟರ್ನಿಂಗ್ ಅಧಿಕಾರಿಯವರು ಚುನಾವಣೆಗೆ ಸ್ಪರ್ಧಿಸುವ ಅಭ್ಯರ್ಥಿಗಳಿಗೆ ಭಾರತೀಯ ಚುನಾವಣಾ ಆಯೋಗವು ಮಾನ್ಯತೆ ನೀಡಿರುವ ರಾಷ್ಟ್ರೀಯ ಪಕ್ಷಗಳ ಮತ್ತು ಕರ್ನಾಟಕ ರಾಜ್ಯದ ಪ್ರಾದೇಶಿಕ ಪಕ್ಷಗಳ ಚಿಹ್ನೆಗಳನ್ನು ಹೊರತುಪಡಿಸಿ ಈ ಕೆಳಕಂಡ ಚುನಾವಣಾ ಚಿಹ್ನೆಯನ್ನು ನೀಡಲು ಅಧಿಕಾರ ಹೊಂದಿರುತ್ತಾರೆ. ಆದರೆ ಮುಕ್ತ ಚಿಹ್ನೆಯ ನೀಡಿಕೆಯಲ್ಲಿ ರಿಟರ್ನಿಂಗ್ ಅಧಿಕಾರಿಯವರದೇ ಅಂತಿಮ ತೀರ್ಮಾನವಾಗಿರುತ್ತದೆ.

1.ಹವಾನಿಯಂತ್ರಕ 2.ಅಲಮಾರು 3.ಆಟೋರಿಕ್ಷಾ 4.ಬೇಬಿ ವಾಕರ್ 5.ಬಲೂನ್ 6.ಬಳೆಗಳು 7.ಹಣ್ಣುಗಳು ಇರುವ ಬ್ಯಾಸ್ಕೆಟ್ 8.ಬ್ಯಾಟ್ 9.ಬ್ಯಾಟುಗಾರ 10.ಬ್ಯಾಟರಿ ಟಾರ್ಚ್ 11.ಮುತ್ತಿನ ಹಾರ 12.ಬೆಲ್ಟ್ 13.ಬೆಂಚ್ 14.ಬೈಸಿಕಲ್ ಪಂಪ್ 15.ದುರ್ಬೀನ್ 16.ಬಿಸ್ಕತ್ತು 17.ಕಪ್ಪುಹಲಗೆ 18.ಹಾಯಿದೋಣಿ ಮತ್ತು ನಾವಿಕ 19.ಪೆಟ್ಟಿಗೆ 20.ಬ್ರೆಡ್ 21.ಬ್ರೆಡ್ ಟೋಸ್ಟರ್ 22.ಇಟ್ಟಿಗೆ (ಬ್ರಿಕ್ಸ್) 23.ಬ್ರೀಫ್ ಕೇಸ್ 24.ಬ್ರಷ್ 25.ಬಕೆಟ್ 26.ಕೇಕ್ 27..ಕ್ಯಾಲ್ಕ್ಯುಲೇಟರ್ 28.ಕ್ಯಾಮರಾ 29.ಕ್ಯಾನ್ 30.ದಪ್ಪ ಮೆಣಸಿನಕಾಯಿ 31.ಕಾರ್ಪೆಟ್ 32.ಕೇರಂ ಬೋರ್ಡ್ 33.ಹೂಕೋಸು 34.ಸಿ.ಸಿ.ಟಿ.ವಿ.ಕ್ಯಾಮರಾ 35.ಚೈನ್ 36.ಬೀಸುವ ಕಲ್ಲು 37.ಚಪಾತಿ ಲಟ್ಟಣಿಗೆ 38.ಪಾದರಕ್ಷೆಗಳು 39.ಚದುರಂಗ ಫಲಕ 40.ಚಿಮಣಿ 41.ಕ್ಲಿಪ್ 42.ಕೋಟು 43.ತೆಂಗಿನ ತೋಟ 44.ಬಣ್ಣದ ತಟ್ಟೆ ಮತ್ತು ಬ್ರಷ್ 45.ಕಂಪ್ಯೂಟರ್ 46.ಕಂಪ್ಯೂಟರ್‌ನ ಮೌಸ್ 47.ಮಂಚ 48.ಕ್ರೇನ್ 49.ಘನ(ಕ್ಯೂಬ್) 50.ಕಟ್ಟಿಂಗ್ ಪ್ಲೇಯರ್ 51.ವಜ್ರ 52.ಡೀಸಲ್ ಪಂಪ್ 53.ಡಿಶ್ ಆ್ಯಂಟೆನಾ 54.ಡೋಲಿ 55.ಬಾಗಿಲಿನ ಘಂಟೆ 56.ಬಾಗಿಲ ಹ್ಯಾಂಡಲ್ 57.ಡ್ರಿಲ್ ಮಷಿನ್ 58.ಡಂಬಲ್ಸ್ 59.ಕಸದ ಬುಟ್ಟಿ 60.ವಿದ್ಯುತ್ ಕಂಬ 61.ಲಕೋಟೆ(ಎನ್‌ವಲಪ್) 62.ಎಕ್ಸ್ಟೆನ್ಷನ್ ಬೋರ್ಡ್ 63.ಕೊಳಲು (ಪ್ಲೂಟ್) 64.ಪುಟ್ ಬಾಲ್ 65.ಪುಟ್ ಬಾಲ್ ಪ್ಲೇಯರ್ 66.ಕಾರಂಜಿ 67.ಲಂಗ(ಫ್ರಾಕ್) 68.ಫ್ರೈಯಿಂಗ್ ಪ್ಯಾನ್ 69.ಫನೆಲ್ 70.ಕಬ್ಬಿನ ರೈತ 71.ಗ್ಯಾಸ್ ಸಿಲಿಂಡರ್ 72.ಗ್ಯಾಸ್ ಸ್ಟೌವ್ 73.ಗಿಫ್ಟ್ ಪ್ಯಾಕ್ 74.ಶುಂಠಿ 75.ಗಾಜಿನ ಟಂಬ್ಲರ್ 76.ಗ್ರಾಮಫೋನ್ 77.ದ್ರಾಕ್ಷಿ 78.ಹಸಿರು ಮೆಣಿಸಿನಕಾಯಿ 79.ಹ್ಯಾಂಡ್ ಕಾರ್ಟ್ 80.ಹಾರ್ಮೋನಿಯಂ 81.ಟೋಪಿ 82.ಹೆಡ್ ಫೋನ್ 83.ಹೆಲ್ಮೆಟ್ 84.ಹಾಕಿ ಮತ್ತು ಚೆಂಡು 85.ಮರಳು ಗಡಿಯಾರ 86.ಐಸ್‌ಕ್ರೀಮ್ 87.ನೀರು ಬಿಸಿ ಮಾಡುವ ರಾಡ್ 88.ಇಸ್ತರಿ ಪೆಟ್ಟಿಗೆ 89.ಹಲಸಿನ ಹಣ್ಣು 90.ಕೆಟಲ್ 91.ಕಿಚನ್ ಸಿಂಕ್ 92.ಬೆಂಡೆಕಾಯಿ 93.ಲೇಡಿ ಪರ್ಸ್ 94.ಲ್ಯಾಪ್‌ಟಾಪ್ 95.ಲಾಚ್ 96.ಅಂಚೆ ಪೆಟ್ಟಿಗೆ 97.ಲೈಟರ್ 98.ಲೂಡೋ 99.ಊಟದ ಡಬ್ಬಿ 100.ಕಹಳೆ ಊದುತ್ತಿರುವ ಮನುಷ್ಯ 101.ಬೆಂಕಿ ಪೊಟ್ಟಣ 102.ಮೈಕ್ 103.ಮಿಕ್ಸಿ 104.ನಾಗರಿಕ(ಪ್ರಜೆಗಳು) 105.ನೇಲ್ ಕಟರ್ 106.ನೆಕ್ ಟೈ 107.ನೂಡಲ್ಸ್ ಬೌಲ್ 108.ಬಾಣಲೆ 109.ಪ್ಯಾಂಟ್ 110.ಕಡಲೆಕಾಯಿಗಳು 111.ಅಂಜೂರ 112.ಬಟಾಣಿ 113.ಪೆನ್‌ಡ್ರೈವ್ 114.ಏಳು ಕಿರಣಗಳಿರುವ ಪೆನ್ನಿನ ನಿಬ್ 115.ಪೆನ್ ಸ್ಟಾಂಡ್ 116.ಪೆನ್ಸಿಲ್ ಬಾಕ್ಸ್ 117.ಪೆನ್ಸಿಲ್ ಶಾರ್ಪನರ್ 118.ಲೋಲಕ 119.ಕುಟ್ಟಾಣಿ(**Pestle and Mortar**) 120.ಪೆಟ್ರೋಲ್ ಪಂಪ್ 121.ಫೋನ್ ಚಾರ್ಜರ್ 122.ತಲೆದಿಂಬು 123.ಕರಣೆ 124.ಆಹಾರವಿರುವ ತಟ್ಟೆ 125.ತಟ್ಟೆ ಸ್ಟ್ಯಾಂಡ್ 126.ಮಡಿಕೆ 127.ಪ್ರೆಷರ್ ಕುಕ್ಕರ್ 128.ಪಂಚಿಂಗ್ ಮಷಿನ್ 129.ರೇಜರ್ 130.ರೆಫ್ರಿಜರೇಟರ್ 131.ಉಂಗುರ 132.ರೋಡ್ ರೋಲರ್ 133.ರೋಬೋಟ್ 134.ರೂಮ್ ಕೂಲರ್ 135.ರೂಮ್ ಹೀಟರ್ 136.ರಬ್ಬರ್ ಸ್ಟಾಂಪ್ 137.ಸೇಪ್ಟಿ ಪಿನ್ 138.ಗರಗಸ 139.ಸ್ಕೂಲ್ ಬ್ಯಾಗ್ 140.ಕತ್ತರಿ 141.ಹೊಲಿಗೆ ಯಂತ್ರ 142.ಹಡಗು 143.ಬೂಟು 144.ಷಟರ್ 145.ಸಿತಾರ್ 146.ಜಿಗಿ ಹಗ್ಗ (ಸ್ಕಿಪ್ಪಿಂಗ್ ರೋಪ್) 147.ಸ್ಲೇಟ್ 148.ಸೋಪ್ ಡಿಶ್ 149.ಕಾಲು ಚೀಲ 150.ಸೋಫಾ 151.ಸ್ಪಾನರ್ 152.ಸ್ಟಾಪ್ಲರ್) 153.ಸ್ಟೆತೊಸ್ಕೋಪ್ 154.ಸ್ಟೂಲ್ 155.ಸ್ಟಂಪ್ಸ್ 156.ಉಯ್ಯಾಲೆ 157.ಸ್ವಿಚ್ ಬೋರ್ಡ್ 158.ಸಿರಿಂಜ್ 159.ಟಿ.ವಿ.ರಿಮೋಟ್ 160.ಟೇಬಲ್ 161.ಟೀ ಫಿಲ್ಟರ್ 162.ಟೆಲಿಫೋನ್ 163.ಟೆಲಿವಿಷನ್ 164.ಟೆನಿಸ್ ರಾಕೆಟ್ ಮತ್ತು ಚೆಂಡು 165.ಟೆಂಟ್ 166.ಜಾವ್ಲಿನ್ ಎಸೆತ 167.ಟಿಲ್ಲರ್ 168.ಟಾಫೀಸ್ 169.ಚಿಮಟ 170.ಹಲ್ಲುಜ್ಜುವ ಬ್ರಷ್ 171.ಹಲ್ಲುಜ್ಜುವ ಪೇಸ್ಟ್ 172.ಟ್ರೇ 173.ತ್ರಿಕೋನ 174.ಟ್ರಕ್ 175.ತುತ್ತೂರಿ 176.ಟ್ಯೂಬ್‌ಲೈಟ್ 177.ಟೈಪ್‌ರೇಟರ್ 178.ಟೈರ್ಸ್ 179.ವಾಕ್ಯೂಮ್ ಕ್ಲೀನರ್ 180.ಪಿಟೀಲು 181.ವಾಕಿಂಗ್ ಸ್ಟಿಕ್ 182.ವಾಲ್ ಹುಕ್ 183.ವ್ಯಾಲೇಟ್ 184.ವಾಲ್ನಟ್ 185.ಕಲ್ಲಂಗಡಿ 186.ವಾಟರ್ ಟ್ಯಾಂಕ್ 187.ಬಾವಿ 188.ವೀಲ್ ಬರೋ 189.ಸೀಟಿ (ವ್ಹಿಷಲ್) 190.ಕಿಟಕಿ 191.ಉಣ್ಣೆ ಮತ್ತು ಸೂಚಿ

10) ಕರ್ನಾಟಕ ಸಹಕಾರ ಸಂಘಗಳ 1960 ರ ನಿಯಮ 14–ಸಿ(1) ರ ಪ್ರಕಾರ ಅಭ್ಯರ್ಥಿಯೇ ಖುದ್ದಾಗಿ ನಮೂನೆ **XV** ರಂತೆ ರಿಟರ್ನಿಂಗ್ ಅಧಿಕಾರಿಗೆ ಲಿಖಿತ ನೋಟೀಸ್ ನೀಡುವ ಮೂಲಕ ತನ್ನ ನಾಮಪತ್ರವನ್ನು ಹಿಂತೆಗೆದುಕೊಳ್ಳಬಹುದು.

11) ಅಭ್ಯರ್ಥಿಗಳು ಒಕ್ಕೂಟದ ಆಡಳಿತ ಮಂಡಲಿಯ ನಿರ್ದೇಶಕರ ಸ್ಥಾನಕ್ಕೆ ಚುನಾವಣೆಗೆ ಸ್ಪರ್ಧಿಸಲು ಯಾವುದೇ ಅನರ್ಹತೆಗಳನ್ನು ಹೊಂದಿರಬಾರದು.

12) ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ 1959ರ ಕಲಂ 39(ಎ) ರಿಂದ ಕಲಂ 39(ಕೆ) ರವರೆಗೆ ಇರತಕ್ಕ ವಿಧಿಗಳನ್ನು ಉಲ್ಲಂಘಿಸಿದಲ್ಲಿ ಅವುಗಳನ್ನು ಚುನಾವಣಾ ಅಪರಾಧಗಳೆಂದು ಪರಿಗಣಿಸಿ ಕಾನೂನು ಕ್ರಮ ಜರುಗಿಸಲಾಗುವುದು.

13) ಕರ್ನಾಟಕ ಸಹಕಾರ ಸಂಘಗಳ ನಿಯಮಗಳ ಪ್ರಕಾರ ಮರು ಮತ ಎಣಿಕೆಗೆ ಅವಕಾಶವಿರುವುದಿಲ್ಲ ಮತ್ತು ಸಮ ಮತಗಳು ಬಂದಲ್ಲಿ ಲಾಟರಿ ಮುಖಾಂತರ ಚುನಾವಣಾ ಫಲಿತಾಂಶವನ್ನು ಘೋಷಿಸಲಾಗುವುದು.

14) ಚುನಾವಣಾ ವೇಳಾ ಪಟ್ಟಿ ಪ್ರಕಟಿಸಿದ ದಿನದಿಂದ ಚುನಾವಣೆ ಮುಗಿಯುವ ವರೆಗೆ ಸಾರ್ವಜನಿಕ ರಜಾ ದಿನಗಳಂದು ರಿಟರ್ನಿಂಗ್ ಅಧಿಕಾರಿ ಹಾಗೂ ಅಪರ ಜಿಲ್ಲಾಧಿಕಾರಿಗಳ ಕಛೇರಿಯು ಚುನಾವಣಾ ಸಂಬಂಧವಾಗಿ ತೆರೆದಿರುತ್ತದೆ.

**ಆಡಳಿತ ಮಂಡಲಿಯ ನಿರ್ದೇಶಕರಾಗಿ ಚುನಾಯಿತರಾಗಲು ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮ 1959, ಕರ್ನಾಟಕ ಸಹಕಾರ ಸಂಘಗಳ ನಿಯಮಗಳು 1960 ಮತ್ತು ಒಕ್ಕೂಟದ ಉಪ ವಿಧಿಗಳಲ್ಲಿ ನಿರ್ಧಿಷ್ಟಪಡಿಸಿದ ಅನರ್ಹತೆಗಳು:**

**ಸದಸ್ಯ ಸಂಘದ ಅಧ್ಯಕ್ಷರು, ಉಪಾಧ್ಯಕ್ಷರು, ನಿರ್ದೇಶಕರುಗಳು ಈ ಕೆಳಕಾಣಿಸಿದ ಕಾರಣಗಳಿಂದ ಒಕ್ಕೂಟದ ಉಪವಿಧಿ ಸಂಖ್ಯೆ:5.22 ರ ರೀತ್ಯಾ ಆಡಳಿತ ಮಂಡಲಿ ಚುನಾವಣೆಗೆ ಸ್ಪರ್ಧಿಸಲು ಅನರ್ಹರಾಗಿರುತ್ತಾರೆ.**

5.22.1 ಕ್ರಿಮಿನಲ್ ಮೊಕದ್ದಮೆಯಲ್ಲಿ ಸಿದ್ಧ ದೋಷಿಯಾಗಿದ್ದರೆ ಮತ್ತು ಬಿಡುಗಡೆಯಾಗಿ 06 ವರ್ಷಗಳು ಸಂಧಿಸಿಲ್ಲದಿದ್ದರೆ.

5.22.2 ದಿವಾಳಿಯಾಗಿದ್ದರೆ ಅಥವಾ ಅನರ್ಹತೆಗೊಂಡಿದ್ದರೆ.

5.22.3 ಸಹಕಾರ ಕಾಯ್ದೆ ಕಲಂ 29ಸಿ ಅನ್ವಯ ಅನರ್ಹತೆಗೊಳಗಾಗಿದ್ದರೆ.

5.22.4 ಸಹಕಾರ ಕಾಯ್ದೆ ಕಲಂ 109, 110, 111ರಡಿಯಲ್ಲಿ ಅಪರಾಧಿಯೆಂದು ಸಾಬೀತಾಗಿದ್ದರೆ

5.22.5 ಒಕ್ಕೂಟ ಮತ್ತು ಸದಸ್ಯ ಸಂಘದವೇತನ ಪಡೆಯುವ ನೌಕರನಾಗಿದ್ದರೆ.

5.22.6 ಸದಸ್ಯ ಸಂಘವು ಕಳೆದ ಸಹಕಾರ ವರ್ಷದಲ್ಲಿ ಎರಡು ಪಾಳಿಯೂ ಸೇರಿ ಕನಿಷ್ಠ 270 ದಿವಸಗಳು ದಿನಕ್ಕೆ 100 ಕೆ.ಜಿ. ಹಾಲು ಸರಬರಾಜು ಮಾಡದೇ ಇದ್ದರೆ.

5.22.7 ಸಂಘವು ಕಳೆದ 3 ಸಹಕಾರ ವರ್ಷಗಳ ಯಾವುದೇ ಅವಧಿಯಲ್ಲಿ ಬೇರೆ ಸಂಸ್ಥೆಗಳಿಗೆ /ಖಾಸಗಿಯವರಿಗೆ ಹಾಲು ಸರಬರಾಜು/ಮಾರಾಟ ಮಾಡಿದ್ದರೆ.

5.22.8 ಕಳೆದ ಸಹಕಾರ ವರ್ಷದಲ್ಲಿ ಅವನು ಪ್ರತಿನಿಧಿಸುವ ಸಂಘ ಪ್ರಾಕೃತಿಕ ವಿಪತ್ತುಗಳನ್ನು ಹೊರತುಪಡಿಸಿ ಸತತ 90 ದಿನಗಳು ಮುಚ್ಚಿದ್ದರೆ/ಆಡಳಿತ ಮಂಡಲಿ ರದ್ದುಗೊಂಡಿದ್ದರೆ/ಸಮಾಪನೆಯಲ್ಲಿದ್ದರೆ.

5.22.9 ತಾನು ಪ್ರತಿನಿಧಿಸುವ ಸಂಘ ಕಳೆದ ಲೆಕ್ಕಪರಿಶೋಧನೆ ವರದಿಯಲ್ಲಿ "ಎ" ಅಥವಾ "ಬಿ" ಆಡಿಟ್ ಶ್ರೇಣಿ ಪಡೆಯದಿದ್ದರೆ.

5.22.10 ತಾನು ಪ್ರತಿನಿಧಿಸುವ ಸಂಘದ ಆಡಳಿತ ಮಂಡಲಿಯ ಸದಸ್ಯನಾಗಿರದಿದ್ದರೆ.

5.22.11 ಚುನಾವಣೆ ಪ್ರಕ್ರಿಯೆ ಪ್ರಾರಂಭವಾಗುವ ದಿನಾಂಕಕ್ಕಿಂತ ಮೊದಲು ಕನಿಷ್ಠ 90 ದಿವಸಗಳು ಸತತವಾಗಿ ಸಂಘವು ಮುಚ್ಚಿದ್ದರೆ.

5.22.12 ಸಂಘದ ಅಥವಾ ಒಕ್ಕೂಟದ ನೌಕರರ ಹತ್ತಿರದ ಸಂಬಂಧಿಯಾಗಿದ್ದರೆ.
(ಸೂಚನೆ: ಹತ್ತಿರದ ಸಂಬಂಧಿಎಂದರೆ ಗಂಡ/ಹೆಂಡತಿ ಮತ್ತು ಅವಿವಾಹಿತ ಮಗಳು ಹಾಗೂ ತಂದೆ/ತಾಯಿ, ಅವಿಭಕ್ತ ಮಗ, ಅವಿಭಕ್ತ ಸಹೋದರ ಮತ್ತು ಅವಿವಾಹಿತ ಸಹೋದರಿ ಮತ್ತು ಸರ್ಕಾರಆಗಿಂದಾಗ್ಗೆ ಹೊರಡಿಸುವ ಸಂಬಂಧಿಗಳೆಂಬ ಅರ್ಥ ವಿಸ್ತರಣೆಗೊಳಪಟ್ಟು)

5.22.13 ಒಕ್ಕೂಟಗಳು ಮಾಡಲ್ಪಟ್ಟ ಯಾವುದೇ ಗುತ್ತಿಗೆಯಲ್ಲಿ ಅಥವಾ ಒಕ್ಕೂಟದ ಯಾವುದೇ ಮಾರಾಟವಾದ ಅಥವಾ ಖರೀದಿ ಮಾಡಿದ ಆಸ್ತಿಯಲ್ಲಿ ನೇರವಾಗಿ ಅಥವಾ ಪರೋಕ್ಷವಾಗಿ ಸಂಬಂಧ ಇರಿಸಿಕೊಂಡಿದ್ದರೆ ಅಥವಾ ಒಕ್ಕೂಟದಿಂದ ಹಣ ಹೂಡುವಿಕೆ ಅಥವಾ ಸಾಲತೆಗೆದುಕೊಳ್ಳುವಿಕೆ ಬಿಟ್ಟು ಬೇರೆಯಾವ ವ್ಯವಹಾರಗಳಲ್ಲಿ ನೇರವಾಗಿ/ಪರೋಕ್ಷವಾಗಿ ಸಂಬಂಧ ಇರಿಸಿಕೊಂಡಿದ್ದರೆ.

5.22.14 ಚುನಾವಣೆ ಪ್ರಕ್ರಿಯೆ ಪ್ರಾರಂಭವಾಗುವ ದಿನಾಂಕಕ್ಕಿಂತ ಮೊದಲು 12 ತಿಂಗಳ ಕಡಿಮೆ ಅವಧಿಗೆ ಒಕ್ಕೂಟದ ಸದಸ್ಯತ್ವ ಹೊಂದಿದ್ದರೆ.

5.22.15 ಕಳೆದ 5 ಸಾಮಾನ್ಯ ಸಭೆಗಳಲ್ಲಿ ಕನಿಷ್ಠ 2 ಸಾಮಾನ್ಯ ಸಭೆಗಳಲ್ಲಾದರೂ ಹಾಜರಿರದಿದ್ದರೆ ಅಥವಾ ಅವನು ಪ್ರತಿನಿಧಿಸುವ ಸದಸ್ಯ ಸಂಘವು ಹಿಂದಿನ ಐದು ಸಹಕಾರ ವರ್ಷಗಳ ಪೈಕಿ ಯಾವುದೇ ಎರಡು ಸಹಕಾರ ವರ್ಷಗಳಿಗಾಗಿ ಉಪವಿಧಿಗಳಲ್ಲಿ ನಿರ್ದಿಷ್ಟ ಪಡಿಸಬಹುದಾದಂತಹ ಕನಿಷ್ಠ ಸೇವೆಗಳನ್ನು ಅಥವಾ ಸೌಲಭ್ಯಗಳನ್ನು ಬಳಸಿಕೊಳ್ಳಲು ವಿಫಲನಾದಲ್ಲಿ;

5.22.16 ಅವನು ಅಥವಾ ಅವನು ಪ್ರತಿನಿಧಿಸುವ ಸದಸ್ಯ ಸಂಘವು ಕಾಯ್ದೆಯಡಿ, ನಿಯಮಗಳಡಿ ಮತ್ತು ಉಪವಿಧಿಗಳಡಿ ಬೇರೆ ಯಾವುದೇ ಅನರ್ಹತೆಗೆಗುರಿಯಾಗಿದ್ದರೆ;

<u>ಒಕ್ಕೂಟದ ಉಪವಿಧಿ ಸಂಖ್ಯೆ:5.23 ರ ರೀತ್ಯಾ ಸದಸ್ಯ ಸಂಘಗಳ ಪ್ರತಿನಿಧಿ ಮತ ಚಲಾಯಿಸಲು ಅನರ್ಹತೆ.</u>

5.23.1 ಪ್ರತಿನಿಧಿಯು ವೈಯಕ್ತಿಕವಾಗಿ ಯಾವುದೇ ಸಹಕಾರ ಸಂಘಕ್ಕೆ ಸುಸ್ತಿದಾರನಾಗಿದ್ದರೆ.

5.23.2 ನಾಮಮಾತ್ರ ಅಥವಾ ಸಹಸದಸ್ಯನಾಗಿದ್ದರೆ

5.23.3 ಚುನಾವಣೆ ಪ್ರಕ್ರಿಯೆ ಪ್ರಾರಂಭವಾಗುವ ದಿನಾಂಕಕ್ಕಿಂತ 12 ತಿಂಗಳ ಕಡಿಮೆ ಅವಧಿಗೆ ಒಕ್ಕೂಟದ ಸದಸ್ಯತ್ವ ಹೊಂದಿದ್ದರೆ.

5.23.4 ತಾನು ಪ್ರತಿನಿಧಿಸುವ ಸಂಘದ ಆಡಳಿತ ಮಂಡಲಿ ಸದಸ್ಯನಾಗಿರದಿದ್ದರೆ.

5.23.5 ತಾನು ಪ್ರತಿನಿಧಿಸುವ ಸಂಘವು ಉಪವಿಧಿ ಸಂಖ್ಯೆ 5.22.6, 5.22.7, 5.22.8 ಮತ್ತು 5.22.11 ರನ್ವಯ ಅನರ್ಹರಾದರೆ.

<u>ವಿಶೇಷ ಸೂಚನೆ</u> : ಮತದಾನ ಸಮಯದಲ್ಲಿ ಸದಸ್ಯ ಸಂಘದ ಡೆಲಿಗೇಟ್‌ಪ್ರತಿ ಮತ್ತು ಸಂಘದ ಪ್ರತಿನಿಧಿಯ ಗುರುತಿನ ಚೀಟಿಯನ್ನು ಕಡ್ಡಾಯವಾಗಿ ಹಾಜರು ಪಡಿಸತಕ್ಕದ್ದು.

ಚುನಾವಣೆಯಲ್ಲಿ ಸ್ಪರ್ಧಿಸುವ ಅಭ್ಯರ್ಥಿಗಳು ನಾಮಪತ್ರಗಳನ್ನು ರಿಟರ್ನಿಂಗ್ ಅಧಿಕಾರಿ ಹಾಗೂ ಅಪರ ಜಿಲ್ಲಾಧಿಕಾರಿಗಳು ಇವರ ಕಛೇರಿ, ಜಿಲ್ಲಾಧಿಕಾರಿಗಳ ಕಛೇರಿ ಕಾರ್ಯಾಲಯ ಮಂಡ್ಯ, ಇಲ್ಲಿ ಶುಲ್ಕ ರೂ.10.00 ಗಳನ್ನು ಪಾವತಿ ಮಾಡಿ ಪಡೆಯಬಹುದು.

<u>ವಿವರಗಳು ಕೆಳಕಂಡಂತಿರುತ್ತವೆ.</u>

| | | |
|---|---|---|
| ನಾಮಪತ್ರ ದೊರೆಯುವ ದಿನಾಂಕ ಮತ್ತು ಸಮಯ | 18–01–2025 ರಿಂದ 25–01–2025ರವರೆಗೆ | ಬೆಳಿಗ್ಗೆ 11.00 ರಿಂದ ಮಧ್ಯಾಹ್ನ 3.00 ಗಂಟೆವರೆಗೆ |
| ನಾಮಪತ್ರ ಸಲ್ಲಿಸುವ ದಿನಾಂಕ ಮತ್ತು ಸಮಯ | 18–01–2025 ರಿಂದ 25–01–2025 ರವರೆಗೆ | ಬೆಳಿಗ್ಗೆ 11.00 ರಿಂದ ಮಧ್ಯಾಹ್ನ 3.00 ಗಂಟೆವರೆಗೆ |

ಸ್ಥಳ: ಮಂಡ್ಯ
ದಿನಾಂಕ: 10–01–2025

ರಿಟರ್ನಿಂಗ್ ಅಧಿಕಾರಿ
ಮಂಡ್ಯ ಜಿಲ್ಲಾ ಸಹಕಾರ ಹಾಲು ಉತ್ಪದಾಕರ ಸಂಘಗಳ
ಒಕ್ಕೂಟ ನಿ,. ಗೆಜ್ಜಲಗೆರೆ, ಮದ್ದೂರು ತಾ.
ಹಾಗೂ ಅಪರ ಜಿಲ್ಲಾಧಿಕಾರಿ, ಜಿಲ್ಲಾಧಿಕಾರಿಗಳ ಕಛೇರಿ, ಮಂಡ್ಯ